‘ಸಣ್ಣ ಚೈನಿದ್ರೆ ಪ್ರಸಾದು ಕುತ್ಗೆಗೆ ಹಾಕ್ತೀನಿ ಕಣ್ರೇ. ಬೆಳ್ಳಿ ಉಡಿದಾರ, ಕಾಲು ಚೈನು ಬಿಟ್ರೆ ಅದರ ಮೈಮೇಲೆ ಚಿನ್ನದ ಚೂರಿಲ್ಲ...’

‘ನಿಮ್ಮಪ್ಪನ ಮನೇಲಿ ಬಾಲೆ ಬಂಗಾರ ಅಂತ ಹೊರಿಸಿ ಕಳ್ಸಿದ್ದಪ್ಪಾ. ಕಿವೀಲಿ ಮುರ ಉಂಟಲ್ಲ?’

‘ಚಾಳಿಸ್ಬೇಡಿ ನನ್ನ. ನಮ್ಮಪ್ಪನ ಮನೇಲಿ ಬಡೋರು. ಇದರ ಅಪ್ಪನ ಮನೇಲಿ ಬಡತನ ಇಲ್ಲ ಅಂದ್ಕಂಡಿದೀನಿ...’ ಗದ್ಗದವಾಗಿತ್ತು ಸೀತಾಲಕ್ಷ್ಮಿಯ ಗಂಟಲು.

‘ಮಾತೆತ್ತಿದ್ರೆ ಅಪ್ಪಿಡು ಆಯ್ತಾ? ಅದೊಂದು ಲಾಯ್ಟು ಗೊತ್ತಿದೆ’ ಪದೇ ಪದೇ ಹೇಳುವ ಅದೇ ಮಾತಾಡುತ್ತಾ ಶಿವರಾಮ ನಗ ಕಟ್ಟಿಟ್ಟಿದ್ದ ದೊಡ್ಡ ತಪ್ಪಲೆ ಗಾತ್ರದ ಗಂಟನ್ನು ತೆಗೆದು ಅವಳೆದುರು ಬಿಚ್ಚಿದ. ನಸುಗತ್ತಲೆಯ ಕೋಣೆಯ ಕಿಟಕಿಯನ್ನು ಬೆಳಕಿನ ಧಾರೆ ಒಳ ಬರುವಂತೆ ಚೂರೇ ತೆಗೆದ. ಒಳಗೆ ನುಗ್ಗಿದ ಬೆಳಕಿನ ಕೋಲಿನಲ್ಲಿ ಹಳೆಗಾಲದ ಚಿನ್ನದ ಒಡವೆಗಳು ಫಳಫಳಗುಟ್ಟಿದುವು.

‘ಅಯ್ಯಬ್ಬಾ, ಇಷ್ಟೊಂದು...’ ಸೀತಾಲಕ್ಷ್ಮಿ ಉದ್ಗರಿಸಿದಳು. ಗಂಡನ ಮನೆಯ ಆಸ್ತಿ ಕಂಡು ಮುಖ ಊರಗಲವಾಗಿತ್ತು. ಅಭಿಮಾನದಿಂದ ಎದೆ ಉಬ್ಬಿತ್ತು.

‘ಒಂದಿನ ನಿಂಗೆ ಇದೆಲ್ಲಾ ತೋರಿಸ್ಬೇಕು ಅಂದ್ಕಂಡಿದ್ದೆ. ಇವತ್ತು ಮುಹೂರ್ತ ಕೂಡಿ ಬಂತು. ನೋಡು, ಎಲ್ಲಾ ತಲೆತಲಾಂತರದಿಂದ ಒಟ್ಟಾಗಿದ್ದು. ಇಷ್ಟು ರಾಷ್ಟ್ರದಲ್ಲಿ ಯಾರ ಮನೇಲಿ ಮದುವೆ ಎದ್ರೂ ನಮ್ಮನೆಯಿಂದ ಮದುಮಗನಾದ್ರೆ ಗುಂಡಿನ ಸರ, ಮದುಮಗಳಾದ್ರೆ ಕಾಸಿನಸರ ತಗೊಂಡ್ಹೋಗ್ತಿದ್ರು. ಅಷ್ಟೇ ನಿಯತ್ತಿಂದ ವಾಪಸು ಕೊಡ್ತಿದ್ರು. ಅಪ್ಪನ ಕಾಲಕ್ಕೆ ಅದೆಲ್ಲಾ ಮುಗೀತು. ಈಗ ಕೊಟ್ರೆ ಮೂರು ನಾಮ...’

ಗಂಡನ ಮಾತು ಕಿವಿಗೆ ಬೀಳದವಳಂತೆ ಒಂದೊಂದನ್ನೇ ಕೈಲಿ ಹಿಡಿದು ಪರಿಶೀಲಿಸುವುದರಲ್ಲಿ ಮುಳುಗಿ ಹೋಗಿದ್ದಳು ಸೀತಾಲಕ್ಷ್ಮಿ.

ತೂಕ ಹಾಕಿದರೆ ಎಷ್ಟು ತೊಲ ಉಂಟೋ? ಸೊಂಟದ ಡಾಬು, ವಂಕಿ, ಜಡೆಬಿಲ್ಲೆ, ನಾನಾ ನಮೂನಿಯ ಒಂದೆಳೆ, ಎರಡೆಳೆ, ಮೂರೆಳೆಯ ಸರಗಳು, ಮಿಣುಗುಟ್ಟುವ ಬೆಂಡೋಲೆಗಳು, ಮೂಗು ಬೊಟ್ಟುಗಳು, ಅಳೆದರೆ ಅಚ್ಚೇರಿಗೆ ಕಮ್ಮಿ ಇಲ್ಲದಷ್ಟು ಉಂಗುರಗಳು, ಡಜನ್ನುಗಟ್ಟಲೆ ನಾನಾ ನಮೂನಿಯ ಬಳೆಗಳು, ಅದೊಂದು ಸಣ್ಣ ಭಂಡಾರ.

‘ಕಳ್ರು ನೀವು...’ ಅಂದಳು ಸೀತಾಲಕ್ಷ್ಮಿ ಸುಮ್ಮಾನದಿಂದ.

‘ಯಾಕೆ?’ ಅವನ ದನಿ ಗೊರಗಾಗಿದ್ದು ಅವಳ ಗಮನಕ್ಕೆ ಬರಲಿಲ್ಲ.

‘ಇಷ್ಟೊಂದು ನಗ ಇಟ್ಗಂಡಿದೀರಿ, ಹಬ್ಬ, ಹುಣ್ಣಿಮೆ ಅಂತ ತೆಕ್ಕೊಡೋದಲ್ವಾ? ಒಂದೊಂದ್ಸಲ ಒಂದೊಂದು ಹಾಕ್ಕಂಬಹುದಿತ್ತಪ್ಪಾ...’

‘ಚಿನ್ನ ಇರೋದು ಪ್ರದರ್ಶನ ಮಾಡೋಕಲ್ಲ ಕಣೇ, ಆಪತ್ತಿಗೆ ಇರಲಿ ಅಂತ ಬ್ಯಾಂಕಲ್ಲಿ ದುಡ್ಡು ಕೂಡಿಟ್ಟ ಹಾಗೆ ಹಿರೀಕರು ಕೊಂಡು ಕೊಂಡು ಇಟ್ಟಿದಾರೆ. ಬ್ಯಾಂಕ್ ಗೀಂಕಿನ ಪಂಚಾತಿಕೆ ಆಗ ಇರ್ಲಿಲ್ವಲ್ಲಾ? ಇದ್ರೂ ಎಲ್ಲೋ ಕಣ್ಣು ಕಾಣದ ಕಡೆ ದುಡ್ಡಿಡೋಕೆ ಹೆದರ್ತಿದ್ರು...’

‘ಕಮಲತ್ತಿಗೆಗೆ ಕೊಟ್ಟಿದ್ದು ಅವಳ ಗಂಡನ ಮನೇಲೇ ಉಳೀತು ಅಂತಿದ್ರಿ. ವೆಂಕಟರಾಮೂಗೆ ಪಾಲು ಕೊಟ್ಟು ಕಳಿಸಿಯಾಯ್ತು. ಆದ್ರೂ ಇಷ್ಟು ಉಳ್ಕೊಂಡಿದೆ ಅಂದ್ರೆ’

‘ಅದನ್ನೇ ನಿಂಗೆ ಹೇಳ್ಬೇಕು ಅಂದ್ಕಂಡಿದ್ದು. ಪಾಲು, ಪಾಲು ಅಂತ ಗಂಡನ್ನ ಛೂ ಬಿಟ್ಲಲ್ಲ, ಅವನಿಗೆ ಚಿನ್ನ ಅಲ್ಲ, ಅದರ ವಾಸನೇನೂ ತೋರಿಸ್ಲಿಲ್ಲ...’

ಝುಗ್ ಅಂತು ಸೀತಾಲಕ್ಷ್ಮಿಯ ಎದೆ. ಇದು ಮೋಸ ಅಲ್ಲವಾ ಅಂದಿತು ಪ್ರಾಮಾಣಿಕತೆ. ‘ಮತ್ತೆ?’ ಕೇಳಿದಳು ಸೀತಾಲಕ್ಷ್ಮಿ.

‘ಮತ್ತೇನೂ ಇಲ್ಲ, ಕತ್ತೇನೂ ಇಲ್ಲ. ಇದರಲ್ಲಿ ಅಮ್ಮನ ಒಡವೇನೂ ಮಸ್ತು ಉಂಟು ಕಣೇ. ನನ್ ಕೈಗೆ ಯಜಮಾನಿಕೆ ಬಂದಾಗ ಎಂತೆಂತದೂ ಇರ್ಲಿಲ್ಲ ಅಂತ ಸಾಧಿಸ್ಬಿಟ್ಟೆ. ನಂಬ್ಲೇಬೇಕು, ಇಲ್ದಿದ್ರೆ ಸಾಕ್ಷಿ ಕೊಡ್ಬೇಕು...’

‘ಥೋ’ ಅಂದಳು ಸೀತಾಲಕ್ಷ್ಮಿ ಪಶ್ಚಾತ್ತಾಪದಿಂದ.

‘ವೆಂಕಟರಾಮೂಗೆ ಗೊತ್ತಿಲ್ದೆ ಇರ್ಬೋದು. ಅತ್ತೆಗೆ ಸತ್ಯ ಗೊತ್ತಿರಲ್ಲೇನ್ರೀ? ಹಿಂಗ್ಯಾಕೆ ಮಾಡಿದ್ರಿ?’

‘ಕಿರಿಮಗನ ಹಿಂದೆ ಹೋದೋಳ ಸುದ್ದಿ ನನ್ಹತ್ರ ಎತ್ಲೇಬೇಡ. ಹುಚ್ಚು ಕೆರಳುತ್ತೆ ನಂಗೆ. ಇಷ್ಟಕ್ಕೂ ಅವಳ ಪಾಲಿಂದು ಕೊಟ್ಟಿದ್ರೆ ಏನ್ಮಾಡ್ತಿದ್ಲು? ಕಿರೀಸೊಸೆಗೆ ಹೊರಿಸಿ ಕೈ ಮುಗೀತಿದ್ಲು. ನಿಂಗೆ ಒಂದು ಗುಲಗುಂಜಿ ತೂಕಾನೂ ದಕ್ಕೋಕೆ ಅವರು ಬಿಡ್ತಿರ್ಲಿಲ್ಲ, ತಿಳ್ಕಾ’

‘ಅದೂ ಸಮ’ ಎಂದು ಸೀತಾಲಕ್ಷ್ಮಿಗೆ ಅನಿಸಲು ವಯಸ್ಸು ಒಂದು ಕಾರಣ. ವ್ಯಾಮೋಹ ಮತ್ತೊಂದು ಕಾರಣ. ಅತ್ತೆಯ ಹತ್ತಿರ ಎಷ್ಟು ಚಿನ್ನ ಇದ್ದರೂ ಅವರು ಅದನ್ನು ಧರಿಸಿ ಮೆರೆದಾಡುವ ಕಾಲ ಮುಗಿದು ಹೋಗಿದೆ. ವಾರಗಿತ್ತಿಯ ತೌರಲ್ಲಿ ಅವಳಿಗೆ ಬೇಕಾದ್ದು ಕೊಟ್ಟಿದ್ದಾರೆ. ಅವಳದ್ದಾಗಿರುವುದು ಇದರಲ್ಲಿ ಏನೂ ಇಲ್ಲ. ಮೊದಲೇ ಎಲ್ಲವನ್ನೂ ಭದ್ರ ಮಾಡಿಕೊಂಡಿದ್ದಾಳೆ ಜಾಣೆ. ಗಂಡ ಅನ್ಯಾಯ ಮಾಡಿದ ಅನಿಸಿದರೂ ಅದನ್ನು ವಿರೋಧಿಸಲು ಮನಸ್ಸಾಗಲಿಲ್ಲ ಹುಡುಗುಬುದ್ಧಿಗೆ.

‘ಅವರು ಇಷ್ಟು ಹಗೆ ಸಾಧಿಸ್ತಿರೋದು ಮತ್ಯಾತಕ್ಕೆ ಅಂದ್ಕಂಡಿದ್ದಿ? ಸೇರುಗಟ್ಟಲೆ ಚಿನ್ನ ಇದ್ದೇ ಇರುತ್ತೆ ಅಂತ ಅವರಿಗೆ ಅಂದಾಜುಂಟು. ಆದರೆ ಸಾಕ್ಷಿ ಇಲ್ಲ. ಗಣಗಣ ಉರೀತಿದ್ರು ಅವಳ ಅಣ್ಣದಿಕ್ಳು’.

‘ಹೆದ್ರಿಕೆಯಾಗುತ್ತೆ ಕಣ್ರೀ. ಪಾಲು, ಪಂಚಾಂತ್ಕೆ ಆದಾಗ ಇಷ್ಟನ್ನೆಲ್ಲಾ ಎಲ್ಲಿ ಮುಚ್ಚಿಟ್ಟಿದ್ರಿ? ಟ್ರೆಜರಿ ತೆಗೆದು ತೋರ್ಸಿ ಅಂದಿದ್ರೆ?’

‘ಟ್ರೆಜರಿ ತೆಗೆಸ್ದೆ ಇರ್ತಾರಾ? ತೆಗೆಸಿದ್ರು. ತಲಾಷು ಮಾಡಿದ್ರು...’

‘ಮತ್ತೆ?’

‘ಅಷ್ರಲ್ಲೇ ಎಲ್ಲಿಗೆ ಸಾಗಿಸ್ಬೇಕೋ ಅಲ್ಲಿಗೆ ಸಾಗಿಸ್ಬಿಟ್ಟಿದ್ದೆ’ ತಾನು ಮಾಡಿದ್ದು ತಪ್ಪು ಎನ್ನುವ ಪಶ್ಚಾತ್ತಾಪದ ಎಳೆಯೂ ಶಿವರಾಮನ ದನಿಯಲ್ಲಿರಲಿಲ್ಲ. ಎಲ್ಲವನ್ನೂ ಮೊದಲಿನಂತೆ ಕಟ್ಟಿಟ್ಟ ಅವನು ಹೆಂಡತಿಯ ಮಕದೆದುರು ತೋರುಬೆರಳು ಆಡಿಸುತ್ತಾ ಹೇಳಿದ,

‘ನಿಂಗ್ಯಾಕೆ ಇದೆಲ್ಲಾ ಹೇಳ್ದೆ ಅಂತ ಅರ್ಥ ಮಾಡ್ಕೋ. ನಮ್ಮನೇಲಿ ಹಳೆಗಾಲದಿಂದ ಬಂದ ಯಾವ್ದನ್ನೂ ಅಪ್ಪ ಉಳಿಸಿರ್ಲಿಲ್ಲ, ಗೊತ್ತಾಯ್ತಾ? ಏನು ಮಾಡ್ದ? ಅಂತ ತಲೆ ಕೆಡಿಸ್ಕಂಡ್ರೆ ಅವರ ಹಣೇಬರ’

‘ಅತ್ತೆಗೂ ಗೊತ್ತಿರಲ್ಲ ಅಂತೀರಾ?’

‘ಗೊತ್ತಿದ್ರೆ ಗೊತ್ತಿರ್ಲಿ. ಹೇಳ್ಲಿಲ್ಲನೇ? ಎಲ್ಲಾನೂ ಕಿರಿಸೊಸೆಗೆ ದಾನ ಮಾಡಿ ಕೂತ್ಗಂತಿದ್ಲು. ಅದರ ಧಿಮಾಕು ಮತ್ತಷ್ಟು ಜಾಸ್ತಿಯಾಗ್ತಿತ್ತು. ಕಮಲಕ್ಕನಿಗೆ ಹಾಕಿದ್ದನ್ನೆಲ್ಲಾ ಅವಳ ಗಂಡನ ಮನೆಯೋರು ನುಂಗಿ ನೀರು ಕುಡಿದ್ರು. ಅಮ್ಮನ ಪಾಲಿಂದನ್ನ ಇವರು ನುಂಗ್ತಿದ್ರು. ನಿನ್ನ ವಾರಗಿತ್ತಿ ಎಷ್ಟು ಜಾಣೆ ನೋಡು. ತೌರುಮನೇಲಿ ಹಾಕಿದ್ದನ್ನು ಅಲ್ಲೇ ಬಿಚ್ಚಿಟ್ಟು ಬಂದಿದ್ಲು. ಈ ಮನೇಗೆ ಕಾಲಿಡೋಕೂ ಮುಂಚೇನೇ ಮನೆ ಒಡೆಯೋ ಯೋಚ್ನೆ ಮಾಡ್ಕಂಡು ಬಂದಿದ್ಲೇನೋ...’

‘.’

‘ನಿಂಗೆ ಎಲ್ಲಾ ಗೊತ್ತಿರ್ಲಿ ಅಂತ ಹೇಳಿದೀನಿ. ನೀನು ಕೇಳಿದ್ದು, ನೋಡಿದ್ದು ಎಲ್ಲಾ ಸುಳ್ಳು, ಗೊತ್ತಾಯ್ತಲ್ಲ?’

ತಲೆ ಅಲುಗಿಸಿದಳು ಸೀತಾಲಕ್ಷ್ಮಿ. ಕಟ್ಟಿದ ಗಂಟನ್ನು ಈ ಸಲ ಟ್ರೆಜರಿಯಲ್ಲಿಡಲಿಲ್ಲ ಗಂಡ. ದೊಡ್ಡ ದೊಡ್ಡ ಪಾತ್ರೆಗಳನ್ನು ತುಂಬಿಟ್ಟಿದ್ದ ಸ್ಟೋರ್ ಕೋಣೆಗೆ ಹೋಗಿ ಒಂದು ಪಾತ್ರೆಯಲ್ಲಿಟ್ಟ. ಆ ಪಾತ್ರೆಯ ಮೇಲೆ ಮತ್ತೊಂದು. ಅದರ ಮೇಲೆ ಮಗದೊಂದು.

‘ನಾವು ವಾಪಸ್ ಬರೋವರೆಗೆ ಇಲ್ಲೇ ಇರ್ಲಿ. ದರೋಡೆಗೆ ಬಂದ್ರೂ ಇದರ ಮೇಲೆ ಕಣ್ಣು ಬೀಳಲ್ಲ...’

ಹೂಂಗುಟ್ಟಿದಳು ಸೀತಾಲಕ್ಷ್ಮಿ. ಈಗಾಗಲೇ ಅವರು ಅತ್ತೆಯ ಬಾಯಿ ಬಿಡಿಸಿರುತ್ತಾರೆ. ಎಷ್ಟಿತ್ತು? ಎಂದು ಹೇಳಲು ಬರದಿದ್ದರೂ ಭರ್ತಿ ಇತ್ತು ಎಂದು ಹೇಳಿರುತ್ತಾರೆ ಅತ್ತೆ. ಹಗೆ ಸಾಧಿಸಲು ಸಾಲದಾ ಇಷ್ಟು?

***

ದಿನ ಕಳೆದಂತೆ ಸೀತಾಲಕ್ಷ್ಮಿಗೆ ಪಾಪಪ್ರಜ್ಞೆ ಕಾಡುತ್ತಾ ಬಂತು. ಗಂಡನ ಮೋಸವನ್ನು ತನ್ನ ಮೇಲೆಳೆದುಕೊಂಡು ಕೊರಗಬೇಕಾಗಿರಲಿಲ್ಲ ಅವಳು. ಗಂಡಂದಿರ ಏನೆಲ್ಲಾ ಲೋಪಗಳನ್ನು, ಭಂಡತನವನ್ನು, ಕಳ್ಳತನವನ್ನು, ಸುಳ್ಳುತನವನ್ನು ತಮ್ಮ ಮೇಲೇಕೆ ವರಗಿಸಿಕೊಳ್ಳುತ್ತಾರೆ ಹೆಂಡಂದಿರು? ತಮ್ಮ ಮರ್ಯಾದೆಯನ್ನು ಅವರ ವರ್ತನೆಯೊಡನೆ ತಳುಕು ಹಾಕಿಕೊಳ್ಳುತ್ತಾರೆ? ಪುರಾಣದ ವಾಲ್ಮೀಕಿಯ ಪತ್ನಿಯೇ ‘ನಿನ್ನ ಪಾಪದಲ್ಲಿ ನಮ್ಮ ಪಾಲಿಲ್ಲ. ಹೆಂಡತಿ ಮಕ್ಕಳನ್ನು ಸಾಕುವುದು ನಿನ್ನ ಹೊಣೆ’ ಅಂದಳಂತೆ. ಆದರೆ ತಮ್ಮಂತವರ ಮನೋಧರ್ಮದಲ್ಲಿ ಬದಲಾವಣೆಯಾಗಿದೆಯೇ? ಆಗಿರಬಹುದು ಬೆರಳೆಣಿಕೆಯಷ್ಟು. ಆದರೆ ತನ್ನಂತವರೇ ಹೆಚ್ಚಿಗೆ ಅನಿಸುತ್ತದೆ ಸೀತಾಲಕ್ಷ್ಮಿಗೆ.

ಕಣ್ಣು ಕುಕ್ಕುವಂಥ ಒಡವೆಗಳನ್ನು ಕಂಡು ಹಿಗ್ಗಿದ್ದು ಕ್ಷಣಭಂಗುರವಾಯ್ತು. ಕೊರೆಯತೊಡಗಿತು ಪಾಪ, ಪುಣ್ಯಗಳ ಭಯ. ಏನೋ ಒಂದು ಕಿತಾಪತಿ ಮಾಡಿಕೊಂಡು, ಅದರಲ್ಲೇ ಸುಖ ಕಂಡುಕೊಂಡು,